ಬಂದಿದ್ದು. ಊರಲ್ಲಿ ನಾ ಸ್ಕ್ರಿಪ್ಟ್ ಬರೀತಿದ್ದೆ. ಆವಾಗ ಊರಲ್ಲಿ ಓಡಾಡ್ತಾ ಇರೋವಾಗ ದುರುಗ್ಯಾನ ಪಾತ್ರದೊಳಗ ವೀರೇಶ ಜೀವಿಸಬಹುದು ಅನಿಸಿತ್ತು. ನಾನು ಬರೆಯೋ ಹಂತದಿಂದಲೇ ಅವ್ನು ನನ್ನೊತೆಗೆ ಇದ್ದ. ಆಮ್ಯಾಲೆ ಅವ್ನಿಗೆ ಕ್ಯಾಮೆರಾದ ಜೊತೆಗೆ ಫ್ರೆಂಡ್‌ಶಿಪ್ ಮಾಡಿಸ್ದೆ. ಉಳುದುದ್ದೆಲ್ಲಾ ಸರಳ ಆಗ್ತಾಹೋಯ್ತು. ಇನ್ನು ದೊಡ್ಡವರೆಲ್ಲರಿಗೆ ತುಂಬಾ ವರ್ಕ್ ಮಾಡಿದ್ವಿ. ಮಹಾದೇವ ಸರ್, ಜಹಾಂಗೀರ್ ಸರ್, ಸಂಧ್ಯಾ ಮೇಡಂ ಅವರು ವಯಸ್ಸು ಮತ್ತು ಪಾತ್ರದ ಆ್ಯಟಿಟ್ಯೂಡ್ ಮೇಲೆ ಹೊಂದಿಕೆ ಆಗಬಹುದು ಅನಿಸಿತ್ತು. ಆಮೇಲೆ ನನ್ ಹತ್ರ ಹೆಚ್ಚಿನ ಚಾಯ್ಸೂ ಇರಲಿಲ್ಲ.

◆ **ಸಿನಿಮಾ ಮಾಡುವುದು ಸುಲಭ, ಥಿಯೇಟರ್‌ಗೆ ತರೋದು ತುಂಬಾ ಕಷ್ಟ ಅಂತಾರೆ. ಉತ್ತರ ಕರ್ನಾಟಕದ ನಮ್ಮಂಥವರಿಗಂತೂ ಅಸಾಧ್ಯವೇ ಎಂಬ ಮಾತಿದೆ. ಏನು ಹೇಳುವಿರಿ?**

ಸಿನಿಮಾ ತೆರೆ ಕಾಣಿಸೋದು ತುಂಬಾ ದೊಡ್ಡ ಟಾಸ್ಕೇ. ನಾಕೈದು ಸಿನಿಮಾಗೆ ಅಸಿಸ್ಟೆಂಟ್ ಡೈರೆಕ್ಟರ್ ಆಗಿ ದುಡ್ಡು, ಅದರ ಅನುಭವದ ಮೇಲೆ ನಾವು ಒಂದು ಸಿನಿಮಾ ಮಾಡಬಹುದು. ಆದರೆ ರಿಲೀಸ್ ಮಾಡೋದಂದ್ರೆ ಆ ಟಾಸ್ಕ್ ಪರಿಚಯನೇ ಇರೋದಿಲ್ಲ. ಕಷ್ಟ ಆಗುತ್ತೆ. ಸಿನಿಮಾ ಕುರಿತು ಕಲೀತಾ ಇರೋವಾಗ ಥಿಯೇಟರ್‌ಗೆ ಬಿಡುಗಡೆ ಮಾಡುವಂಥದ್ದು, ಸಿನಿಮಾ ಡಿಸ್ಟ್ರಿಬ್ಯೂಶನ್‌ನಂತಹ ವಿಷಯಗಳು ನನ್ನಂತಹ ಅಸಿಸ್ಟೆಂಟ್ ಡೈರೆಕ್ಟರ್‌ವರೆಗೆ ತಲುಪಿರಲ್ಲ. ಅವುಗಳೆಲ್ಲ ನಮಗೆ ಹೊಸದು. ಸಹಾಯಕರು ಆಗಿರುವಾಗಲೇ ನಾವದನ್ನು ಕಲಿಬೇಕು. ಪ್ರಕಾಶ ರೈ ಸರ್ ಇದ್ದಿದ್ದರಿಂದ 'ಫೋಟೋ' ಸಿನಿಮಾ ರಿಲೀಸ್ ನನಗೆ ಅಷ್ಟಾಗಿ ಕಾಡ್ಲಿಲ್ಲ. ಪ್ರಚಾರ ದೃಷ್ಟಿಯಿಂದನೂ ಇದು ನಮಗೆ ಪೂರಕವಾಯ್ತು.

ಸಿನಿಮಾಗೆ ಮುಂಚೇನೆ ನಾವು ಮೆಂಟಲಿ ಪ್ರಿಪೇರ್ ಆಗಿದ್ವಿ, ಸಿನಿಮಾ ಥಿಯೇಟರ್‌ಗೆ ತರಲು ಆಗದಿದ್ರೆ ಊರೂರಿಗೆ ಹೋಗಿ ಅಲ್ಲೊಂದು ಸಮುದಾಯ ಭವನಾನೋ, ಗುಡಿಯೋ, ಶಾಲಾ ಕಾಲೇಜುಗಳಲ್ಲೋ ಪ್ರೊಜೆಕ್ಟರ್ ಮೂಲಕವಾದರೂ ಸರಿ ಎಲ್ಲರಿಗೂ ಸಿನಿಮಾ ತಲುಪಿಸೋಣ ಅಂದ್ಕೊಂಡಿದ್ವಿ. ಮೊದಲೇ ಗೊತ್ತಿತ್ತು, ನಮಗೆ ಈ ರೀತಿ ಥಿಯೇಟರ್ ಸಮಸ್ಯೆ ಆಗಬಹುದು ಅಂತ. ಅದಕ್ಕೆ ರೆಡಿ ಆಗಿರೋದ್ರಿಂದ ನಮಗದು ಸಮಸ್ಯೆ ಅಂತನಿಸಲಿಲ್ಲ.

◆ **ನಾವೆಲ್ಲ ಸಣ್ಣವರಿದ್ದಾಗ ದಿನಾರಾತ್ರಿಗಳು ಬಯಲಾಟದ ತಾಲೀಮಿನ ಸುತ್ತ ಹಬ್ಬಿಕೊಂಡಿರುತ್ತಿದ್ದವು. ಈ ಸಿನಿಮಾದ ರಾತ್ರಿ ಸನ್ನಿವೇಶಗಳಿಗೆಲ್ಲ ಬಯಲಾಟದ ಮದ್ದಲೆ, ಪಿಟೀಲು ಮತ್ತು ಮಾಸ್ತರನ ಧ್ವನಿ ಮತ್ತು ಬಯಲಾಟದ ಮಾತುಗಳನ್ನು ಹಿನ್ನೆಲೆಯಾಗಿ ಉಳಿಸಿಕೊಂಡಿದ್ದೀರಿ. ಈ ರೀತಿಯ ಆಲೋಚನೆ ಹೇಗೆ ಬಂತು?**

ಬೇರೆಯವ್ರಿಗೆ ಅದು ಹೊಸದು ಇರಬಹುದಾದರೂ, ನನಗೆ ಅದು ಜೀವನ, ನನ್ನ ಬದುಕು. ರಾತ್ರಿ ಆದ್ರೆ ನನಗೆ ಕೇಳಿಸುತ್ತಿದ್ದುದೇ ಹಿರೇ



ಮಹಾದೇವ ಹಡಪದ

ನಾಟ್ಟದ ಸೌಂಡ್, ಅಂದ್ರೆ ಬಯಲಾಟದ ಮಾಸ್ತರನ ಪಿಟೀಲು ಸೌಂಡ್. ನಾನು ಮಲಗಿದಾಗ ಊರಾಗ ನನಗ ಏನ್ ಕೇಳ್ತದೋ ಅದು ನನ್ನ ಸಿನಿಮಾದ ಹಿನ್ನೆಲೆ ಆಗಿತ್ತು. ತುಂಬಾ ಸಹಜವಾಗಿ ನಾನದನ್ನ ಬಳಸ್ಕೊಂಡೆ.

◆ **ನಿಮ್ಮ ಚೊಚ್ಚಿಲ ನಿರ್ದೇಶನದ 'ಫೋಟೋ' ಕುರಿತು ಅತ್ಯುತ್ತಮ ಸ್ಪಂದನ ವ್ಯಕ್ತವಾಗ್ತಾ ಇದೆ. ಈ ಸಿನಿಮಾ ಕಟ್ಟಿಕೊಡಲು ನೀವು ತರಬೇತಾದದ್ದು ಹೇಗೆ? ಯಾರೆಲ್ಲ ನಿಮ್ಮ ಮೇಲೆ ಪ್ರಭಾವ ಬೀರಿದ್ದಾರೆ?**

ನನಗೆ ಕನ್ನಡದಲ್ಲಿ ಸಿನಿಮಾ ಕುರಿತಾದ ಅಷ್ಟು ಒಳ್ಳೆ ಪುಸ್ತಕಗಳು ಸಿಗ್ಲಿಲ್ಲ. ನಾ ಇಂಗ್ಲಿಷ್‌ನಲ್ಲೇ ಓದಿದೆ. ತುಂಬಾ ಸಿನಿಮಾಗಳನ್ನು ನೋಡಿದೆ. ತುಂಬಾ ಕಾಡಿದ್ದು ಮತ್ತು ಪ್ರಭಾವಿಸಿದ್ದು ಇಟಾಲಿಯನ್ ಸಿನಿಮಾ 'ದಿ ಬೈಸಿಕಲ್ ಥೀವ್ಸ್'. ಅದು ನನ್ನನ್ನ ತುಂಬಾ ಇನ್‌ಫ್ಲುಯೆನ್ಸ್ ಮಾಡಿದೆ. ಇಂಡಿಯಾದಲ್ಲಿ ನಾಗರಾಜ ಮಂಜುಳೆಯವರ ಮರಾಠಿ ಸಿನಿಮಾ 'ಫಂಡ್ರಿ' ತುಂಬಾ ಉಳ್ದಿದೆ ನನ್ನೊಳಗೆ.

◆ **ದುರುಗ್ಯಾನಿಗೆ ವಿಧಾನಸೌಧದ ಮುಂದೆ ನಿಂತು ಫೋಟೊ ತೆಗೆಸಿಕೊಂಡು, ಡಿ–ಬಾಸ್ ಅವರನ್ನು ಭೇಟಿಯಾಗುವ ಕನಸು. ಅಂತಹದ್ದೊಂದು ಆಸೆ ಬಾಲ್ಯದಲ್ಲಿ ನಿಮಗೂ ಇತ್ತೇ?**

ಬೆಂಗ್ಳೂರ್ ಅಂದ್ರೆ ವಿಧಾನಸೌಧ ಅಷ್ಟೇ ಇದ್ದಿದ್ದು ನನ್ ತಲೇಲಿ. ವಿಧಾನಸೌಧದ ಮುಂದೆ ಫೋಟೊ ತೆಗಿಸ್ಕಬೇಕು ಅನ್ನೋ ಆಸೆ ಇತ್ತು ನನಗೂ, ಚಿಕ್ಕೋನಿದ್ದಾಗಿನಿಂದ್ಲು. ನಾನು ಫಸ್ಟ್ ವಿಧಾನಸೌಧದ ಮುಂದೆ ನಿಂತ್ಕೊಂಡು ಫೋಟೊ ತೆಗಿಸ್ಕೊಂಡಿದ್ದು, 'ಫೋಟೋ' ಸಿನಿಮಾ ಶೂಟಿಂಗ್ ಎಲ್ಲಾ ಮುಗಿದ ಮೇಲೆ; ಎಲ್ಲಾ ಟೆಕ್ನೀಷಿಯನ್ಸ್ ಮತ್ತೆ ನಟರೆಲ್ಲ ಜೊತೆಗೆ ನಿಂತ್ಕೊಂಡು ಫೋಟೊ ತೆಗೆಸಿಕೊಂಡ್ವಿ.

◆ **'ಏನೋ ಸಿನಿಮಾ ಮಾಡ್ತಿದಾನೆ' ಅಂತ ಭಾವಿಸಿದ್ದ ನಿಮ್ಮ ಕುಟುಂಬ ವರ್ಗ, ಗೆಳೆಯರ ಬಳಗ, ಊರಿನವರು ಈಗ ಸಿನಿಮಾಗೆ ಸಿಕ್ಕ ವ್ಯಾಪಕ ಯಶಸ್ಸಿಗೆ ಹೇಗೆ ಪ್ರತಿಕ್ರಿಯಿಸುತ್ತಿದ್ದಾರೆ?**

ಪ್ರತಿಕ್ರಿಯೆ ಎಲ್ಲಾ ತರಹಾನು ಇತ್ತು. ಆಮೇಲೆ ಸಿನಿಮಾ ಅನ್ನೋದು ನಮ್ ಭಾಗಕ್ಕೆ ಒಂಥರಾ ನಿಲುಕದ ನಕ್ಷತ್ರ ಇದ್ದಂಗ. ಬೆಂಗ್ಳೂರಿಗೆ ಬಂದು ಏನೋ ಮಾಡ್ತೀವಿ ಅನ್ನೋದು ವಜ್ಜೆ ಮಾತು. ಗಾರೇ ಕೆಲ್ಸ, ಕೂಲಿ ಕೆಲಸ ಬಿಟ್ಟು ಬೇರೇನಾದರೂ ಮಾಡ್ತಾನೆ ಅಂಬೋದೆ ಕಷ್ಟದ ಮಾತು. ಅಂಥದ್ರಲ್ಲಿ ಉದ್ದುದ್ದ ಕೂದ್ಲ ಬಿಟಗಂಡು ಸಿನಿಮಾ ಅದು ಇದು ಅಂತ ಹುಡ್ಗ ಖಿಲಾಸಾತನ ಅಂತಾನೂ ಅಂದಿದ್ರು. ಇಲ್ಲ, ಹುಡ್ಗ ಹುಷಾರೈತಿ, ಏನರ ಮಾಡ್ತೈತಿ ಅಂತಾನು ಅಂದಿದ್ರು. ಈಗ ಎಲ್ಲರೂ ಖುಷಿ ಅದಾರ. ಮುಖ್ಯವಾಗಿ ಈ ವಿಷಯದಲ್ಲಿ ನನ್ ಬೆನ್ನಿಗೆ ನಿಂತದ್ದು ಅವ್ವ.

◆ **ಈ ಸಿನಿಮಾ ಮೂಲಕ ಏನನ್ನು ಹೇಳಬೇಕು ಅಂತ ಆರಂಭದಲ್ಲಿ ನಿಮಗೆ ಅನಿಸಿತ್ತು?**

ಈ ಸಿನಿಮಾ ಮಾಡಬೇಕಾದ್ರೆ ಏನೂ ಹೇಳಬಾರದು ಅನ್ಕೊಂಡಿದ್ದೆ! ಏನಾಗಿತ್ತು, ಅದನ್ನ ತೋರಿಸಬೇಕು ಅಷ್ಟೇ ಅನ್ಕೊಂಡಿದ್ದೆ. ಅದನ್ನಷ್ಟೇ ನಾನು ತುಂಬಾ ಪ್ರಾಮಾಣಿಕವಾಗಿ ಹೇಳುವ ಪ್ರಯತ್ನ ಮಾಡಿದೆ. ನಾನು ಏನನ್ನ ಕಂಡಿದ್ದೆನೋ ಆ ದಿನಗಳಲ್ಲಿ ಅದನ್ನ ನಾ ಪ್ರಾಮಾಣಿಕವಾಗಿ ಡಾಕ್ಯುಮೆಂಟ್ ಮಾಡಾಣ ಅನ್ಕೊಂಡು, ಎಷ್ಟು ಪ್ರಾಮಾಣಿಕವಾಗಿ ಆಗುತ್ತೋ ಅಷ್ಟು ಪ್ರಾಮಾಣಿಕವಾಗಿ ಮಾಡಿರೋದು 'ಫೋಟೋ'.

◆ **ಸಿನಿಮಾದುದ್ದಕ್ಕೂ ಮಾತು ಮತ್ತು ಮೌನ ಜೊತೆಗೆ ಸಾಗುತ್ತವೆ. ಕೆಲವೊಂದು ದೃಶ್ಯದಲ್ಲಿ ಮೌನ ಮಾತಿಗಿಂತಲೂ ಶಕ್ತಿಶಾಲಿ ಎನಿಸುವಷ್ಟು ನೀವು ಮೌನವನ್ನು ಬಳಸಿಕೊಂಡಿದ್ದೀರಿ. ಜಾಡಿಗೆ ಬಿದ್ದ ಸಿನಿಮಾಗಳಿಗಿಂತ ವಿಭಿನ್ನ ಅನಿಸುವ ಈ ಪ್ರಯತ್ನ ಹೇಗೆ ಸಾಧ್ಯವಾಯಿತು?**

'ಫೋಟೋ' ಕಥೆ ಬರೆವಾಗ ನಾ ಕೂರ್ಗ್‌ನಿಂದ ನಮ್ಮೂರಿಗೆ ಬೈಕಲ್ಲಿ ಟ್ರಾವೆಲ್ ಮಾಡ್ದೆ. ರಸ್ತೇಲಿ ಯಾರಂದ್ರೆ ಯಾರೂ ಇರಲಿಲ್ಲ. ಖಾಲಿ ಖಾಲಿ ರಸ್ತೆಗಳು. ನಾನೊಬ್ನೆ. ಅದೊಂದು ಅಸಹನೀಯ ಮೌನ. ಯಾವ ಪೂರ್ವ ಸೂಚನೆಯಿಲ್ಲದೆ ಪ್ರಭುತ್ವ ಹೇರಿದ ಆ ಅಸಹನೀಯ ಮೌನ; ಅದೇ ನನಗೆ ತುಂಬಾ ಎಫೆಕ್ಟ್ ಮಾಡ್ತು ಅನಿಸುತ್ತೆ.

ಅದ್ಕೆ ಅವತ್ತು ಅಷ್ಟುದ್ದುದ ರೋಡಲ್ಲಿ ಒಬ್ನೆ ಒಂಟಿಯಾಗಿ ಮೌನವನ್ನ ಫೀಲ್ ಮಾಡಿದ್ನೆಲಾ ಅದನ್ನೆ ಉಳ್ಳಿಕೊಳ್ಳುವ ಪ್ರಯತ್ನ ಮಾಡಿದೆ, ಅದು ಸಕ್ಸಸ್ ಆಯ್ತು ಅನಸ್ತದ. ಯಾವುದೇ ಸಿನಿ ದೃಶ್ಯವನ್ನ ಸಂಗೀತ, ಅದು ಇರೋದಕ್ಕಿಂತ ಸ್ವಲ್ಪ ಹೆಚ್ಚು ಮಾಡಿ ತೋರಿಸಬಹುದು ಅಥವಾ ಆ ಭಾವ ಸನ್ನಿವೇಶವನ್ನ ಕುಬ್ಜಗೊಳಿಸಬಹುದು. ಅದಕ್ಕೇ ನನ್ನ 1 ಗಂಟೆ 37 ನಿಮಿಷದ ಚಿತ್ರಪಟದಲ್ಲಿ ಎಲ್ಲೂ ಸಂಗೀತ ಬಳಸಾಕ ಹೋಗಿಲ್ಲ. ಸಿನಿಮಾ ಮುಗುದ ಮ್ಯಾಲೆ, ಕೊನಿಗೆ ಹೆಸ್ರು ರೋಲ್ ಆಗ್ಬೇಕಾದ್ರೆ, ಶಿಲ್ಪಾ ಮುಡುಬಿ ಹಾಡಿದ ಆ ಹಾಡು ತನ್ನಷ್ಟಕ್ಕೆ ತಾನು ಬರ್ತದ ಅಷ್ಟೆ.

◆ **ನಿಮ್ಮ ಮುಂದಿನ ಪ್ರಾಜೆಕ್ಟ್ ಬಗ್ಗೆ ಹೇಳಿ.**

ಹೊಸದೊಂದು ಕಥೆಯ ಮೇಲೆ ಕೆಲ್ಸ ಮಾಡ್ತಿದೀನಿ. ಆ ಕುರಿತು ಮುಂದೆ ಎಲ್ಲರೊಂದಿಗೆ ಹಂಚಿಕೊಳ್ತೀನಿ. ಇಷ್ಟು ಮಾತ್ರ ಹೇಳಬಲ್ಲೆ, ನಾನು ನನ್ನೂರಿನ ಕಥೆಗಳನ್ನೇ ಮಾಡ್ತೀನಿ. ಯಾಕೆಂದ್ರೆ ಅದೇ ನನ್ನ ಜಗತ್ತು. ಆ ಕಥೆಗಳಿಗೂ ನಾನು ಪರಿಚಿತ. ಅಲ್ಲಿನ ಬದುಕು, ಅಲ್ಲಿ ಭಾಷೆ ನನಗೆ ಗೊತ್ತು. ಸದ್ಯಕ್ಕಂತೂ ಬೇರೆ ಕಥೆಗಳು ನನ್ ತಲೆಯಲ್ಲಿ ಇಲ್ಲ.

ಪ್ರತಿಕ್ರಿಯಿಸಿ: feedback@sudha.co.in